# ಹಲಸಂಗಿ ಗೆಳೆಯರ ಬಳಗದ ಮದುವಣಿಗ (ಧೂಲಾ)

ಬಸೀರಾಬಾನು ನಿಡಗುಂದಿ*

DOI: https://doi.org/10.5281/zenodo.20614424

**ABSTRACT**

ಹೊಸಗನ್ನಡ ಸಾಹಿತ್ಯದ ಮೊದಲ ಘಟ್ಟ ನವೋದಯ ಸಾಹಿತ್ಯ. ಈ ಸಾಹಿತ್ಯ ಘಟ್ಟದಲ್ಲಿ ಒಟ್ಟು ನಾಲ್ಕು ಗೆಳೆಯರ ಬಳಗಗಳನ್ನು ಕಾಣುತ್ತೇವೆ. ಬಿ. ಎಂ. ಶ್ರೀ ಗೆಳೆಯರ ಬಳಗ, ಬೇಂದ್ರೆ ಗೆಳೆಯರ ಬಳಗ, ಮಂಗಳೂರು ಗೆಳೆಯರ ಬಳಗ ಮತ್ತು ಹಲಸಂಗಿ ಗೆಳೆಯರ ಬಳಗ. ಉತ್ತರ ಕರ್ನಾಟಕದ ವಿಜಯಪುರ ಜಿಲ್ಲೆಯ ಹಲಸಂಗಿ ಎಂಬ ಗ್ರಾಮದಲ್ಲಿ ಹುಟ್ಟಿದ 'ಹಲಸಂಗಿ ಗೆಳೆಯರ ಬಳಗ'ದ ಮೇಲೆ ಗಾಢ ಪರಿಣಾಮ ಬೀರಿದ್ದು ಜನಪದ ಸಾಹಿತ್ಯ. 1922 ರಲ್ಲಿ ಸ್ಥಾಪಿತವಾದ ಗೆಳೆಯರ ಬಳಗ, 1943 ರ ವರೆಗೆ ಈ ಗೆಳೆಯರು ಸಾಹಿತ್ಯಿಕ ಚಟುವಟಿಕೆಯಲ್ಲಿ ತೊಡಗಿದ್ದರು. 1943ರ ನಂತರ ಈ ಗೆಳೆಯರ ಬಳಗ 'ಶ್ರೀ ಅರವಿಂದ ಮಂಡಳ'ವಾಗಿ ಪರಿವರ್ತನೆಗೊಂಡಿತು. ಹಲಸಂಗಿ ಗೆಳೆಯರ ಗುಂಪಿನ ಪ್ರಮುಖ ಸದಸ್ಯರೆಂದರೆ– ಮಧುರಚೆನ್ನ(ಚೆನ್ನಮಲ್ಲಪ್ಪ), ಸಿಂಪಿ ಲಿಂಗಣ್ಣ, ಪಿ. ಧೂಲಾಸಾಹೇಬ(ಪಟೇಲ್ ಕಾಸೀಮಸಾಬ), ಕಾಪಸೆ ರೇವಪ್ಪ, ಓಲೇಕಾರ ಮಾದಣ್ಣ, ಚೆನ್ನಪ್ಪ ಸರಸಂಬಿ, ಆದಮ ಮಸಳಿ, ಶಿವಲಿಂಗಪ್ಪ ಸರಸಂಬಿ, ಗುರುಬಸಪ್ಪ ಗಲಗಲಿ ಮತ್ತು ರಾಘವೇಂದ್ರ ಸುರಪುರ(ರಾಘಣ್ಣ). ಈ ಗುಂಪಿನ ಎಲ್ಲ ಸದಸ್ಯರು ಕರ್ನಾಟಕದ ಬೇರೆ ಬೇರೆ ಭಾಗದಲ್ಲಿ ಇರತಕ್ಕಂತಹ ಸಾಹಿತಿಗಳೊಂದಿಗೆ ಉತ್ತಮ ಸ್ನೇಹ ಸಂಬಂಧವನ್ನು ಹೊಂದಿದ್ದರು. ವರಕವಿ ಬೇಂದ್ರೆ, ಡಾ. ಶಿವರಾಮ ಕಾರಂತ, ರಂ. ಶ್ರೀ ಮುಗಳಿ, ವಿ. ಕೃ. ಗೋಕಾಕ ಮತ್ತು ಸ. ಸ. ಮಾಳವಾಡ ಇವರೆಲ್ಲ ಹಲಸಂಗಿಗೆ ಬಂದು ಹಲಸಂಗಿ ಗೆಳೆಯರ ಬಳಗದೊಂದಿಗೆ ನವೀನ ಚಿಂತನೆಗಳನ್ನು ಹಂಚಿಕೊಳ್ಳುತ್ತಿದ್ದರು.

**KEYWORDS:** ಹಲಸಂಗಿ ಗೆಳೆಯರ ಬಳಗ, ಪಿ. ಧೂಲಾಸಾಹೇಬ, ವೀರಪಥಿಕ, ಜೀವನ ಸಂಗೀತ.

* **ಡಾ. ಬಸೀರಾಬಾನು ನಿಡಗುಂದಿ,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಇರಕಲ್ಲಗಡ, ಕೊಪ್ಪಳ.

ಹಲಸಂಗಿ ಗೆಳೆಯರ ಮಧ್ಯ ತುಂಬಾ ಪ್ರೀತಿ ಮತ್ತು ಅನ್ಯೋನ್ಯತೆ ಇತ್ತು. ಪಟೇಲ್ ಕಾಸೀಮಸಾಬರಿಗೆ ಗೆಳೆಯರೆಲ್ಲರೂ 'ಧೂಲಾ'(ಮದುಮಗ) ಎಂದು ಕರೆಯುತ್ತಿದ್ದರು. ಅದೇ ಹೆಸರಿನಿಂದ ಇಂದಿಗೂ ಅವರನ್ನು ಗುರುತಿಸಲಾಗುತ್ತಿದೆ. ಹಾಗೆಯೇ ಚೆನ್ನಮಲ್ಲಪ್ಪ ಮತ್ತು ಓಲೇಕಾರ ಮಾದಣ್ಣ ಅವರ ಸ್ನೇಹ ಎಷ್ಟು ಅನನ್ಯವಾಗಿತ್ತೆಂದರೆ ಅವರ ಸ್ನೇಹದ ಫಲವಾಗಿ ಸೃಷ್ಟಿಯಾದ ನೀಳ್ಗವಿತೆ ಮಧುರಚೆನ್ನರ 'ಮಧುರ ಗೀತ'. ಈ ನೀಳ್ಗವಿತೆಯ ಮೂಲ ವಸ್ತು ಮಾದಣ್ಣನ ಪರಿಚಯ ಮಾಡಿಕೊಡುವುದರ ಜೊತೆಗೆ ಗೆಳೆತನದ ಮೌಲ್ಯವನ್ನು ತಿಳಿಸಿಕೊಡುವುದು. 'ಮಧುರಚೆನ್ನ' ಕಾವ್ಯನಾಮ ರೂಪಗೊಂಡಿದ್ದು ಇಬ್ಬರ ಹೆಸರು ಬೆರೆತು. ಮಾದಣ್ಣನ 'ಮಧು', ಚೆನ್ನಮಲ್ಲಪ್ಪನವರ 'ಚೆನ್ನ'(ಮಧು+ರ+ಚೆನ್ನ) ಬೆರೆತು 'ಮಧುರಚೆನ್ನ' ಆಗಿದ್ದು ತುಂಬಾ ವಿಶೇಷ. ಹಲಸಂಗಿ ಗೆಳೆಯರಲ್ಲಿಯೇ ಚಿಕ್ಕವರೆಂದರೆ ಕಾಪಸೆ ರೇವಪ್ಪ. ಆದ್ದರಿಂದ ಇವರಿಗೆ ಎಲ್ಲ ಗೆಳೆಯರು 'ಬಾಲಕವಿ' ಎಂದು ಕರೆಯುತ್ತಿದ್ದರು. ಧೂಲಾ ಮಾತ್ರ ಇವರನ್ನು 'ಬ್ಯಾರೇ' (ಬೇರೆ) ಎಂಬ ವಿಚಿತ್ರ ಹೆಸರಿನಿಂದ ಕರೆಯುತ್ತಿದ್ದರು. ಚೆನ್ನಮಲ್ಲಪ್ಪ, ಸಿಂಪಿ ಲಿಂಗಣ್ಣ ಮತ್ತು ಪಿ. ಧೂಲಾಸಾಹೇಬ ಮೂವರು ಬಾಲ್ಯದ ಸ್ನೇಹಿತರು. ಧೂಲಾಸಾಹೇಬರ ಮನೆಯ ಮೊಗಸಾಲೆಯಲ್ಲಿ ಈ ಎಲ್ಲ ಗೆಳೆಯರು ದಿನಾಲು ಸೇರಿಕೊಂಡು ಸಾಹಿತ್ಯಿಕ ವಿಷಯಗಳ ಚರ್ಚೆ ಮಾಡುತ್ತಿದ್ದರು.

**ಪಿ. ಧೂಲಾಸಾಹೇಬ:** ನವೋದಯ ಸಾಹಿತ್ಯದ ಮೊದಲ ಮಹಮ್ಮದೀಯ ಕವಿ ಎಂದೇ ಕರೆಯಲ್ಪಡುವವರು ಪಿ. ಧೂಲಾಸಾಹೇಬರು. ಇವರು ಜನಿಸಿದ್ದು 1901 ರಲ್ಲಿ. ತಂದೆ ಹುಸೇನ ಖಾನ, ತಾಯಿ ಚಾಂದಬೀಬಿ ಮತ್ತು ಅಣ್ಣ ಜಲಾಲ್ ಖಾನ. ಗೆಳೆಯರು ಇವರನ್ನು ಪ್ರೀತಿಯಿಂದ 'ಧೂಲಾ' ಎಂದು ಕರೆಯುತ್ತಿದ್ದರು. ಇವರ ನಿಜವಾದ ಹೆಸರು 'ಪಟೇಲ ಕಾಸೀಮಸಾಬ'. 'ಪಟೇಲ' ಎಂಬುದು ಇವರ ಮನೆತನದ ಹೆಸರು. ಆದಿಲ್‌ಶಾಹಿ ರಾಜರ ಕಾಲದಿಂದಲೂ ಇವರ ಮನೆತನದವರು ಹಲಸಂಗಿ ಮತ್ತು ನಂದ್ರಾಳ ಗ್ರಾಮದಲ್ಲಿ ಗೌಡಕಿ ನಡೆಸಿಕೊಂಡು ಬಂದಿದ್ದರು. ಒಂದು ಕಾಲದಲ್ಲಿ ಶ್ರೀಮಂತಿಕೆಯಿಂದ ಮೆರೆದ ಈ ಮನೆತನ, ಧೂಲಾಸಾಹೇಬರ ಕಾಲಕ್ಕೆ ಬಡತನ ಆವರಿಸಿತ್ತು. ಬಡತನದ ಮಧ್ಯೆಯು 'ಪಟೇಲ' ಎನ್ನುವ ನಾಮ ಅವರ ಆದರ್ಶ ವ್ಯಕ್ತಿತ್ವದ ಶ್ರೀಮಂತಿಕೆಯನ್ನು ತೋರಿಸುತ್ತಿತ್ತು. ಧೂಲಾಸಾಹೇಬರು ಆಜನ್ಮ ಬ್ರಹ್ಮಚಾರಿ. ದೇಶಕ್ಕೆ ಸ್ವಾತಂತ್ರ್ಯ ಸಿಗುವವರೆಗೂ ತಾನು ತಲೆಗೂದಲನ್ನು ಕತ್ತರಿಸಿಕೊಳ್ಳುವುದಿಲ್ಲ ಮತ್ತು ಮದುವೆಯಾಗುವುದಿಲ್ಲ ಎಂದು ಪ್ರತಿಜ್ಞೆಗೈದಿದ್ದರು. ಆದರೆ ದುರದೃಷ್ಟವಶಾತ್ ದೇಶಕ್ಕೆ ಸ್ವಾತಂತ್ರ್ಯ ಸಿಗುವ ಮೊದಲೇ ಅಕಾಲಿಕ ಮರಣವನ್ನಪ್ಪಿದ್ದು ನೋವಿನ ಸಂಗತಿ.

ಧೂಲಾಸಾಹೇಬರು ಶಾಲೆಗೆ ಹೋಗಿ ಕಲಿತದ್ದು ಮೂರನೇ ತರಗತಿಯವರೆಗೆ ಮಾತ್ರ. ನಂತರ ಮುಲಕೀ ಪರೀಕ್ಷೆ ಪಾಸು ಮಾಡಿದರು. ಇದಕ್ಕೆ ಕಾರಣ ಗೆಳೆಯ ಮಧುರಚೆನ್ನ. ಮಧುರಚೆನ್ನರು 1921ರಲ್ಲಿ ಧೂಲಾಸಾಹೇಬರ ಮನೆಯ ಜಗುಲಿಯಲ್ಲಿ ಕುಳಿತು ಮುಲಕೀ ಪರೀಕ್ಷೆಯ ಸಿದ್ಧತೆ ನಡೆಸುತ್ತಿದ್ದರು. ಆಗ ಇವರ ಮಾರ್ಗದರ್ಶನದಲ್ಲಿ

ಧೂಲಾಸಾಹೇಬರು ಮುಲಕೀ ಪರೀಕ್ಷೆ ಕಟ್ಟಿ ಪಾಸು ಮಾಡಿದರು. ಗೆಳೆಯ ಸಿಂಪಿ ಲಿಂಗಣ್ಣನವರು 'ಶ್ರೀ ಮಧುರಚೆನ್ನರ ಸ್ಮೃತಿಗಳು' ಎಂಬ ತಮ್ಮ ಕಾವ್ಯದಲ್ಲಿ ಧೂಲಾಸಾಹೇಬರ ಬಗ್ಗೆ ಹೀಗೆ ಹೇಳುತ್ತಾರೆ– "ಪಿ. ಧೂಲಾಸಾಹೇಬರು ಮುಲಕೀ ಪರೀಕ್ಷೆ ತೇರ್ಗಡೆ ಹೊಂದಿದ ಬಳಿಕ ಮುಂದೆ ವಿದ್ಯಾಭ್ಯಾಸವನ್ನು ಸಾಗಿಸಲು ಅನುಕೂಲವಾಗದೆ, ಆತನೂ ಸಹ ವಿಜಯಪುರದಲ್ಲಿ ಶ್ರೀ ಕೊಣ್ಣೂರ ಹಣಮಂತರಾಯರಲ್ಲಿ ಬಂದು ನಿಂತು ಖಾಸಗಿಯಾಗಿ ಇಂಗ್ಲೀಷ್ ಹೇಳಿಸಿಕೊಳ್ಳುತ್ತಿದ್ದನು(ಈಗಾಗಲೇ ಮಧುರಚೆನ್ನರು ಅವರಲ್ಲಿಯೇ ಖಾಸಗಿಯಾಗಿ ಇಂಗ್ಲೀಷ್ ಕಲಿಯುತ್ತಿದ್ದರು). ದಪ್ಪವಾದ ದೇಹ, ತುಂಬಿದ ಮುಖ, ಶಾಂತವಾದ ಕಳೆ ಇವು ಅವನ ವ್ಯಕ್ತಿತ್ವವನ್ನು ರೂಪಿಸಿದ್ದವು. ದೊಡ್ಡದಾದ ಖಾದಿಯ ಅಂಗಿ, ತಲೆಗೆ ಹದಿನಾಲ್ಕು ಮೊಳದ ಪಟಕ, ತಿರುಚಿದ ಕಚ್ಚಿ, ದಪ್ಪ ಕಾಲ್ಮರೆ ಇವು ಅವನ ವ್ಯಕ್ತಿತ್ವಕ್ಕೆ ಅಲಂಕಾರಗಳಾಗಿದ್ದವು. ಎದೆಯ ಮೇಲಿನ ಎರಡೂ ಕಿಸೆಗಳಲ್ಲಿ ಪುಸ್ತಕ–ದಿನಚರಿಗಳು ಅಡಗಿಕೊಂಡಿರುತ್ತಿದ್ದವು. ಆತನು ತನ್ನ ಊಟದ ವ್ಯವಸ್ಥೆ ಮಾಡಿಕೊಂಡು ಕೊಣ್ಣೂರವರಲ್ಲಿ ಪಾಠ ಹೇಳಿಸಿಕೊಳ್ಳುತ್ತಿದ್ದನು. ಆದರೆ ಊಟದ ವ್ಯವಸ್ಥೆಗೆ ಹಣವೆಲ್ಲಿಂದ ತರುತ್ತಿದ್ದನು ? ಅವನು ವಿಜಯಪುರದಲ್ಲಿ ಇಬ್ಬರು ವಿದ್ಯಾರ್ಥಿಗಳಿಗೆ ದಿನಾಲು ಸಂಜೆಗೆ ಪಾಠ ಹೇಳುವ ಕೆಲಸ ವಹಿಸಿಕೊಂಡಿದ್ದನು. ಕೊಣ್ಣೂರವರಲ್ಲಿ ತಾನು ಹೇಳಿಸಿಕೊಂಡು ಬಂದ ಪಾಠಗಳನ್ನೇ ಆ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದನು. ಇದರಿಂದ ಬರುವ ಹಣದಿಂದ ಒಂದು ಅಗ್ಗದ ಖಾನಾವಳಿಯಲ್ಲಿ ಊಟ ಮಾಡುತ್ತಿದ್ದನು" ಎಂದು ಅವರ ವ್ಯಕ್ತಿತ್ವದ ಕುರಿತು ಬರೆಯುತ್ತಾರೆ. ಮುಂದೆ ಅನಿವಾರ್ಯ ಕಾರಣದಿಂದ ತಮ್ಮ ಇಂಗ್ಲೀಷ್ ಕಲಿಕೆ ಅರ್ಧಕ್ಕೆ ನಿಲ್ಲಿಸಿ ಹಲಸಂಗಿಗೆ ಮರಳಬೇಕಾಯಿತು.

ಸ್ನೇಹಿತನ ನೆರವಿನಿಂದ ಮುಲಕೀ ಪರೀಕ್ಷೆ ಪಾಸು ಮಾಡಿದ್ದಲ್ಲದೆ ಸಾಹಿತ್ಯಿಕ ಬರವಣಿಗೆಯಲ್ಲಿ ತೊಡಗಿಕೊಂಡರು. 'ಆನಂದಕಂದ, ಕವಿಕರ್ಣ ಮತ್ತು ಕಾಡಹಕ್ಕಿ' ಎಂಬ ಕಾವ್ಯನಾಮದಿಂದ ಬರವಣಿಗೆ ಪ್ರಾರಂಭವಾಯಿತು. 'ಕಾಡಹಕ್ಕಿ' ಕಾವ್ಯನಾಮ ಮುಂದುವರೆದು ಉಳಿದೆರಡು ಕಾವ್ಯನಾಮಗಳು ಅಷ್ಟು ಪ್ರಚುರ ಪಡೆಯಲಿಲ್ಲ. ಹಲಸಂಗಿ ಗೆಳೆಯರ ಬಳಗದಿಂದ ಪ್ರಾರಂಭವಾದ 'ಮೊಗ್ಗು' ಮತ್ತು 'ವಿಶ್ವಾಮಿತ್ರ' ಎನ್ನುವ ಕೈಬರಹದ ಪತ್ರಿಕೆಯಲ್ಲಿ 'ಕವಿಕರ್ಣ' ಕಾವ್ಯನಾಮದಿಂದ ಅನೇಕ ಕಂದಪದ್ಯಗಳನ್ನು ಮತ್ತು ಲಾವಣಿಗಳನ್ನು ಬರೆದು ಪ್ರಕಟಿಸಿದರು. ಇದೇ ಸಂದರ್ಭದಲ್ಲಿ ಅವರು ಹತ್ತೆಂಟು ಸಣ್ಣ ಕಥೆಗಳನ್ನು ಸಹ ಬರೆದರು ಎಂದು ತಿಳಿದು ಬರುತ್ತದೆ. ಆದರೆ ದುರದೃಷ್ಟವಶಾತ್ ಅವು ಯಾವ ಬರವಣಿಗೆಗಳು ನಮಗೆ ದೊರೆತಿಲ್ಲ.

ಪಿ. ಧೂಲಾಸಾಹೇಬರು ಡಾ. ಶಿವರಾಮ ಕಾರಂತ ಮತ್ತು ಬೇಂದ್ರೆಯವರ ಜೊತೆ ಉತ್ತಮ ಸ್ನೇಹ ಸಂಬಂಧ ಹೊಂದಿದ್ದರು. ಕಾರಂತರು ಹಲಸಂಗಿಗೆ ಬಂದಾಗ ಧೂಲಾಸಾಹೇಬರೊಂದಿಗೆ ಲಾವಣಿ ಸಂಗ್ರಹಿಸಲು ಬೇರೆ–ಬೇರೆ ಸ್ಥಳಗಳಿಗೆ ಭೇಟಿಕೊಟ್ಟಿದ್ದರು. ಕಾರಂತರು ತಮ್ಮ ಆತ್ಮ ಚರಿತ್ರೆ 'ಸ್ಮೃತಿ ಪಟಲದಿಂದ, ಭಾಗ–3' ರಲ್ಲಿ ಮಧುರಚೆನ್ನ ಮತ್ತು ಧೂಲಾಸಾಹೇಬರ ಬಗ್ಗೆ ಹೀಗೆ ಬರೆಯುತ್ತಾರೆ–

“ಬೇಂದ್ರೆಯವರ ಶಿಷ್ಯವರ್ಗಕ್ಕೆ ಸೇರಿದ್ದ ವ್ಯಕ್ತಿಗಳಲ್ಲಿ ‘ಕಾಳ ರಾತ್ರಿ’ಯ ಲೇಖಕರಾದ ಹಲಸಂಗಿಯ ಚೆನ್ನಮಲ್ಲಪ್ಪ ಒಬ್ಬನಾಗಿದ್ದ. ಆತ, ಆತನ ಮಿತ್ರ ಧೂಲಾ(ಅಂದಿನ ಆನಂದಕಂದ) ಇವರಿಬ್ಬರನ್ನೂ ನಾನು ಅವರ ಊರಾದ ಹಲಸಂಗಿಯಲ್ಲಿ ಎರಡೆರಡು ಬಾರಿ ಕಂಡು ಬಂದೆ. ಅದೇ ಹಲಸಂಗಿ ಊರಿನಲ್ಲಿ ಒಂದು ದಿನ ನಾನು ಮತ್ತು ಬೇಂದ್ರೆಯವರು ಹೋಗಿ, ಉಪನ್ಯಾಸ ಮಾಡಿ, ಎರಡು ಬೇವಿನ ಮರಗಳನ್ನು ನಟ್ಟು ಬಂದಿದ್ದೇವೆ. ಅವು ಈ ನಾಲ್ಕು ದಶಕಗಳಲ್ಲಿ ಬೆಳೆದು ಸಾಕಷ್ಟು ದೊಡ್ಡವಾಗಿರಬೇಕು. ಆದರೆ ಅವನ್ನು ಸಾಹಿತಿಗಳು ನಟ್ಟದ್ದರಿಂದ, ತಮ್ಮ ಕಹಿಯನ್ನು ಮಾತ್ರ ಎಂದೂ ಬಿಟ್ಟಿರಲಾರವು. ಚೆನ್ನಮಲ್ಲಪ್ಪ ಮತ್ತು ಧೂಲಾ ತಮ್ಮ ನಡೆನುಡಿಗಳಿಂದ, ಸ್ವಚ್ಛ ಬದುಕಿನಿಂದ, ನನ್ನ ಆದರಕ್ಕೆ ವಿಶೇಷ ಪಾತ್ರರಾದ ವ್ಯಕ್ತಿಗಳು. ಧೂಲಾ ಆ ಮೇಲೆ ಕೆಲವು ವರ್ಷಗಳಲ್ಲಿ ತೀರಿಕೊಂಡ. ಅನಂತರವೋ ಏನೋ ಬೆಟಗೇರಿ ಕೃಷ್ಣಶರ್ಮರು ಆತ ಇರಿಸಿಕೊಂಡಿದ್ದ ಅಂಕಿತನಾಮ ‘ಆನಂದ ಕಂದ’ ಎಂಬುದನ್ನು ತಮ್ಮ ಹೆಸರಿಗೆ ಬಳಸತೊಡಗಿದರು” ಎಂದು ಹೇಳುತ್ತಾರೆ.

**ಪಿ. ಧೂಲಾಸಾಹೇಬರ ಸಾಹಿತ್ಯ ಕೃಷಿ:**

ಜನಪದ ಸಾಹಿತ್ಯ ಸಂಗ್ರಹ ಮತ್ತು ಪ್ರಕಟಣೆ ಕಾರ್ಯ ಮೊಟ್ಟ ಮೊದಲು ಪ್ರಾರಂಭವಾಗಿದ್ದು ಹಲಸಂಗಿ ಗೆಳೆಯರ ಬಳಗದಿಂದ. 1919ರಲ್ಲಿ ಹಾಸನದಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಮನುವಂತಗೌಡರು ‘ಲಾವಣಿಗಳು’ ಎಂಬ ವಿಷಯದ ಕುರಿತು ಲೇಖನ ಓದಿದ್ದರು. ನಂತರ 1923ರಲ್ಲಿ ವಿಜಯಪುರದಲ್ಲಿ 9ನೇ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತು. ಈ ಸಮ್ಮೇಳನದಲ್ಲಿ ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದ ವಿಷಯ ಮಂಡನೆ ಮಾಡಿದವರು ಹಲಸಂಗಿ ಗೆಳೆಯರು. ಮಧುರಚೆನ್ನರು ‘ಹಳ್ಳಿಯ ಹಾಡುಗಳು’ ಎಂದು ಬೀಸುವ ಕಲ್ಲಿನ ಹಾಡುಗಳ ಬಗ್ಗೆ ಮತ್ತು ಪಿ. ಧೂಲಾಸಾಹೇಬರು ‘ಲಾವಣಿಯ ಲಾವಣ್ಯ’ ಎಂದು ಲಾವಣಿಗಳ ಬಗ್ಗೆ ಲೇಖನಗಳನ್ನು ಮಂಡಿಸಿದರು. ಗೆಳೆಯರ ಈ ಎರಡೂ ಲೇಖನಗಳು ಕನ್ನಡ ಸಾಹಿತ್ಯ ಪತ್ರಿಕೆಯಲ್ಲಿ 1924ರಲ್ಲಿ ಪ್ರಕಟವಾದವು. ನಂತರ 1925 ರಲ್ಲಿ ಮಾಸ್ತಿಯವರು ‘ಕನ್ನಡ ಲಾವಣಿ ಸಾಹಿತ್ಯ’ ಎಂಬ ಲೇಖನ ಕನ್ನಡ ಸಾಹಿತ್ಯದ ಪತ್ರಿಕೆಯಲ್ಲಿ ಬರೆದು ಪ್ರಕಟಿಸಿದರು. ಹೀಗೆ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳ ಪ್ರಕಟಣೆ ಕಾರ್ಯವೇನೋ ನಡೆಯಿತು, ಆದರೆ ಮೊಟ್ಟ ಮೊದಲಿಗೆ ಜನಪದ ಸಾಹಿತ್ಯ ಸಂಗ್ರಹ ಮಾಡಿ ಪ್ರಕಟಣೆ ಮಾಡಿದವರೆಂದರೆ ಹಲಸಂಗಿ ಗೆಳೆಯರು.

ಪಿ. ಧೂಲಾಸಾಹೇಬರ ಎರಡು ಕೃತಿಗಳು ಮಾತ್ರ ದೊರೆತಿವೆ. ಸಿಂಪಿ ಲಿಂಗಣ್ಣನವರೊಂದಿಗೆ 1933ರಲ್ಲಿ ‘ಜೀವನ ಸಂಗೀತ’ ಎಂಬ ಲಾವಣಿ ಸಂಗ್ರಹ ಮತ್ತು 1938ರಲ್ಲಿ ‘ವೀರಪಥಿಕ’ ಎಂಬ ಸ್ವತಂತ್ರ ಕವನ ಸಂಕಲನ. ಈ ಎರಡು ಕೃತಿಗಳು ಗೆಳೆಯರ ಬಳಗದ ಪ್ರಕಾಶನ ‘ಅರವಿಂದ ಗ್ರಂಥಮಾಲೆ’ಯಿಂದ ಪ್ರಕಟಗೊಂಡವು.

**ಜೀವನ ಸಂಗೀತ:** ಕರ್ನಾಟಕದ ಮೊಟ್ಟ ಮೊದಲ ಪ್ರಕಟಿತ ಲಾವಣಿ ಸಂಗ್ರಹ ಕೃತಿ ಇದಾಗಿದೆ. ಇದು ಶೃಂಗಾರ ಮತ್ತು ಹಾಸ್ಯ ಪ್ರಧಾನವಾದ ಕೃತಿಯಾಗಿದೆ. ‘ಜೀವನ

ಸಂಗೀತ'ದಲ್ಲಿ 7 ಜನ ಲಾವಣಿಕಾರರ ಒಟ್ಟು 14 ಲಾವಣಿಗಳಿವೆ. 12 ದೀರ್ಘ ಲಾವಣಿಗಳಾದರೆ, ಒಂದು ಸಖಿ ಇನ್ನೊಂದು ಖ್ಯಾಲಿ(ಹಿಂದೂಸ್ತಾನಿ ಹಾಡುಗಾರಿಕೆಯಲ್ಲಿ ಒಂದು ಪ್ರಕಾರ). 7 ಜನ ಲಾವಣಿಕಾರರಲ್ಲಿ ಖಾಜಾ ಸಾಹೇಬರು ಪ್ರಮುಖರು. ಉಳಿದವರು ಶ್ರೀ ಕುಬ್ಬಣ್ಣ, ಗೋಪಾಲ ದುರದುಂಡಿ, ನಾನಾ ಸಾಹೇಬ, ನ್ಯಾಮಣ್ಣ, ಸಂಗಣ್ಣ ಮತ್ತು ಸಿದ್ದು ಶಿವಲಿಂಗ ಪ್ರಮುಖರು. ಖಾಜಾ ಸಾಹೇಬರ 'ಅಸಲಜಾತ ಹೆಣ್ಣು, ಸಂಪಿಗೆ ತೆನಿಯಂಥ ಹುಡುಗ, ಚಂದ್ರುಣಿ ಮತ್ತು ಕರಿಹುಡುಗಿ' ಎಂಬ ನಾಲ್ಕು ಲಾವಣಿಗಳಿವೆ. ಶ್ರೀ ಕುಬ್ಬಣ್ಣನವರ 'ವತ್ಸಲಾಹರಣ', ಸಂಗಣ್ಣನವರ 'ಗೋಕುಲಾಷ್ಟಮಿ', ನಾನಾ ಸಾಹೇಬರ 'ಬಸಿರಿದ್ದಿನ್ಹೆಸರಿನ್ನೇನಿಡೂನ', ನ್ಯಾಮಣ್ಣನವರ 'ನಾಗರ ಪಂಚಮಿ', ಸಿದ್ದು-ಶಿವಲಿಂಗರವರ 'ಕೃಷ್ಣಲೀಲೆ, ಗಿಡ್ಡ ಪೋರಿ ಮತ್ತು ಭೀಷ್ಮ ಪರ್ವ', ಗೋಪಾಲ ದುರದುಂಡಿಯವರ 'ಅಷ್ಟುರ ಮಾತಿದು' ಹೀಗೆ 12 ಶೃಂಗಾರ ಲಾವಣಿಗಳಿವೆ. ಇವುಗಳ ಜೊತೆಗೆ ಎರಡು ಚಿಕ್ಕ ಲಾವಣಿಗಳನ್ನು ಮೊದಲೊಂದು ಮತ್ತು ಕೊನೆಯಲ್ಲಿ ಒಂದು ಸೇರಿಸಿ ಪ್ರಕಟಿಸಲಾಗಿದೆ. ಈ ಲಾವಣಿಗಳ ಸಂಗ್ರಹದಲ್ಲಿ ಪಿ.ಧೂಲಾಸಾಹೇಬರದು ಪ್ರಮುಖ ಪಾತ್ರವಿತ್ತು. ಆಗಿನ ಪ್ರಸಿದ್ಧ ಲಾವಣಿ ಹಾಡುಗಾರ ರಾಮಚಂದ್ರನೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡು ಲಾವಣಿ ಸಂಗ್ರಹಿಸಲು ಅವರೊಟ್ಟಿಗೆ ಅಲೆದಾಡಿದ್ದಾರೆ. ಇವರೊಂದಿಗೆ ಕಾರಂತರ ಊರಾದ ಪುತ್ತೂರಿಗೂ ಹೋಗಿ ಬಂದಿದ್ದು ವಿಶೇಷ. 'ಜೀವನ ಸಂಗೀತ'ದಲ್ಲಿ ಲಾವಣಿಗಳ ಸಂಖ್ಯೆ ಕಡಿಮೆ ಇದ್ದರೂ, ಅವು ವೈವಿಧ್ಯಪೂರ್ಣ ಮತ್ತು ವಿಶಿಷ್ಟವಾಗಿವೆ.

**ವೀರಪಥಿಕ:** 'ವೀರಪಥಿಕ' ಪಿ. ಧೂಲಾಸಾಹೇಬರ ಸ್ವತಂತ್ರ ಪ್ರಕಟಿತ ಕವನ ಸಂಕಲನ. ಅವರು ಕಥೆಗಳು, ಲಾವಣಿಗಳನ್ನು ಬರೆದಿರುವುದಾಗಿ ತಿಳಿದು ಬಂದರೂ ಅವು ಯಾವವೂ ನಮಗೆ ದೊರೆತಿಲ್ಲ. 'ವೀರಪಥಿಕ'ದಲ್ಲಿ 'ಪಥಿಕ, ವಸಂತನ ಮರೆ, ಬೇರೊಂದು ಬಾಯಾರಿಕೆ, ವಿರಹ, ಮರವಿನ ಮನವೆ!, ಪೂರ್ಣತೆ, ಕಂಡೆ, ಕವಿ, ಅಂತರಾರಾಮ ಮತ್ತು ಸಾವು ಹೂವು' ಎಂಬ ಒಟ್ಟು 11 ಭಾವಗೀತೆಗಳು ಮತ್ತು 'ಅರಬಿಯಾದ ಅಭಿಮನ್ಯು' ಎಂಬ ಒಂದು ಖಂಡಕಾವ್ಯ ಇದೆ. ಈ ಕವನ ಸಂಕಲನದ ವಿಶೇಷತೆಯ ಬಗ್ಗೆ ಮಧುರಚೆನ್ನರು- "ತಮ್ಮ ತಮ್ಮ ಜೀವನವನ್ನು ವಿಶಿಷ್ಟ ಧ್ಯೇಯದ ಪಡಿಯಚ್ಚಿನಲ್ಲಿ ಎರಕ ಹೊಯ್ಯುವ ಆಧುನಿಕ ಧ್ಯೇಯವಾದಿ ಯುವಕರೆಲ್ಲರ ಜೀವನಪಥದಲ್ಲಿ ಬರುವ ದುರಂತ ಉತ್ಥಾನ ಪತನಗಳ ಹೃದಯೋಚ್ಛ್ವಾಸದ ತರಂಗಗಳೇ ಈ ಕವಿತೆಗಳು. ಹೊರಗಿನ ಒಳಗಿನ ಅಪರಿಮಿತ ವಿಘ್ನಬಾಧೆಗಳನ್ನು ಎದುರಿಸಿ ತಮ್ಮ ಧ್ಯೇಯದೆಡೆಗೆ ಸಾಗುವ ವೀರಪಥಿಕರ ಹಾದಿಯ ಹಾಡುಗಳಿವು" ಎಂದು ಹೇಳಿದ ಮಾತುಗಳನ್ನು ಗಮನಿಸಿದರೆ ಈ ಕವಿತೆಯ ವೈಶಿಷ್ಟ್ಯತೆ ಸ್ಪಷ್ಟವಾಗುತ್ತದೆ.

ಹಲಸಂಗಿಯ ಗೆಳೆಯರು ನಾಡು-ನುಡಿಯ ಸೇವೆಗಾಗಿ, ಆಧ್ಯಾತ್ಮಿಕ ಸಾಧನೆಗಾಗಿ ತಮ್ಮನ್ನು ತಾವು ಮುಡಿಪಾಗಿಟ್ಟವರು. ಪರಮಾತ್ಮನ ಸಾಕ್ಷಾತ್ಕಾರ ಅವರ ಬದುಕಿನ ಅಚಲ ಸಾಧನೆಯಾಗಿತ್ತು. ಈ ದೃಷ್ಟಿಯಿಂದ 'ವೀರಪಥಿಕ'ನ ಮೊದಲ ಹತ್ತು ಭಾವಗೀತೆಗಳಲ್ಲಿ ಸೃಷ್ಟಿಯ ಸೊಬಗು, ಕತ್ತಲೆ-ಬೆಳಕು, ಸೃಷ್ಟಿಯ ಅಳಿವು-

ಉಳಿವುಗಳಿಗೆ ಕಾರಣನಾದ ಪರಮಾತ್ಮನ ಕೃಪೆಗೆ ಹಂಬಲಿಸುವುದನ್ನು ಕಾಣಬಹುದು. ಒಮ್ಮೆ ಬೇಂದ್ರೆಯವರು ಒಂದು ಪತ್ರದಲ್ಲಿ ಪಿ. ಧೂಲಾಸಾಹೇಬರಿಗೆ ಹೀಗೆ ಬರೆದು ಕಳುಹಿಸಿದ್ದರಂತೆ– "ನಿನ್ನ ಹೆಸರನ್ನೇ ನೆನೆ ಆಗ ಅದರಲ್ಲೇ ನಿನಗೆ ಬೇಕಾದ್ದು ಕಂಡಿತು" ಎಂದು. ಇದರ ಪ್ರತಿಫಲವಾಗಿ ಮೂಡಿ ಬಂದ ಖಂಡಕಾವ್ಯವೇ 'ಅರಬಿಯಾದ ಅಭಿಮನ್ಯು(ವೀರಕಾಸೀಮ)'.

'ಅರಬಿಯಾದ ಅಭಿಮನ್ಯು' ಒಂದು ಖಂಡಕಾವ್ಯ. ವೀರಕಾಸೀಮನ ಧೀರತೆಯ ಬಗ್ಗೆ ಚಿತ್ರಿಸುವ ನೀಳ್ಗವನ. ಪಿ. ಧೂಲಾಸಾಹೇಬರ ವ್ಯಕ್ತಿತ್ವ, ಆದರ್ಶ ಬದುಕಿನ ನೆರಳಚ್ಚಾಗಿ ಈ ಖಂಡಕಾವ್ಯ ಮೂಡಿ ಬಂದಿದೆ. ವೀರಕಾಸೀಮನಾಗಿ ಧೂಲಾಸಾಹೇಬರೇ ಕಾಣಿಸಿಕೊಳ್ಳುತ್ತಿರುವುದನ್ನು ಕಾಣಬಹುದು. ಮಹಮ್ಮದ ಪೈಗಂಬರರ ಮರಿಮಗ ಕಾಸೀಮ ಕಾಳಗದಲ್ಲಿ ವೀರಮರಣವನ್ನಪ್ಪುವನು. ಈತನೂ ಸಹ ಮಹಾಭಾರತದ ವೀರ ಅಭಿಮನ್ಯುವಿನಂತೆ ಹೋರಾಡಿ ಮೃತ್ಯು ಪಡೆದವನು. ಅಭಿಮನ್ಯು ಅಮರತ್ವದ ವಿಜಯ ಪಡೆದಂತೆ, ಕಾಸೀಮನು ಅಮರನಾಗಿದ್ದಾನೆ ಎಂದು ಅವನನ್ನು 'ಅರಬಿಯಾದ ಅಭಿಮನ್ಯು' ಎಂದು ಕರೆದರು.

ಪಿ. ಧೂಲಾಸಾಹೇಬರು ಈ ಎರಡು ಕೃತಿಗಳ ಬರವಣಿಗೆಯ ನಂತರ ಹಲಸಂಗಿ ಗೆಳೆಯರ ಸಂಪರ್ಕದಿಂದ ಸ್ವಲ್ಪ ಅಂತರವನ್ನು ಕಾಯ್ದುಕೊಂಡರೆಂದು ಸಿಂಪಿ ಲಿಂಗಣ್ಣನವರು ಹೇಳುತ್ತಾರೆ. ಅದಕ್ಕೆ ಕಾರಣವೊ ಇತ್ತು ಎಂದು ತಮ್ಮ ಕೃತಿ– 'ಶ್ರೀ ಮಧುರಚೆನ್ನರ ಸ್ಮೃತಿಗಳು' ಇದರಲ್ಲಿ ಹೀಗೆ ಬರೆಯುತ್ತಾರೆ– "ಹಲಸಂಗಿ ಗೆಳೆಯರ ಕೆಲವು ಯೋಜನೆಯಲ್ಲಿ ಪಿ.ಧೂಲಾಸಾಹೇಬರು ಅಷ್ಟೊಂದು ಉತ್ಸುಕತೆಯನ್ನು ತೋರಲಿಲ್ಲ. ಅದಕ್ಕೊಂದು ಕಾರಣವೂ ಇತ್ತು. ಏನೆಂದರೆ ಜಯಕರ್ನಾಟಕ ಗ್ರಂಥಮಾಲೆಯಲ್ಲಿ ಪ್ರಕಟವಾದ 'ಜೀವನ ಸಂಗೀತ' ಗ್ರಂಥವು ನಮ್ಮ ಭಾಗದ ಪ್ರಮುಖ ಲಾವಣಿಕಾರರ ಲಾವಣಿಗಳ ಸಂಗ್ರಹವಾಗಿತ್ತು. ಅದಕ್ಕೆ ಸಂಗ್ರಾಹಕರೆಂದು ನನ್ನ ಹಾಗೂ ಧೂಲಾಸಾಹೇಬರ ಹೆಸರು ಹಾಕಿತ್ತು. ಅದರಲ್ಲಿ ಶೃಂಗಾರ ರಸದ ಲಾವಣಿಗಳು ಹೆಚ್ಚಾಗಿದ್ದವು. ಒಂದೆರಡು ಪತ್ರಿಕೆಗಳಲ್ಲಿ 'ಜೀವನ ಸಂಗೀತ' ಪುಸ್ತಕದ ವಿಮರ್ಶೆ ಬಂದಿದ್ದವು. ಅದರಲ್ಲಿ ಶೃಂಗಾರ ಲಾವಣಿಗಳ ವಿಷಯವಾಗಿ ತುಸು ವಕ್ರದೃಷ್ಟಿಯು ಕಾಣಿಸಿಕೊಂಡಿತ್ತು. ಅದು ಧೂಲಾಸಾಹೇಬರಿಗೆ ಅಸಹ್ಯವೆನಿಸಿತ್ತು. ತಮ್ಮ ಹೆಸರು ಕೆಟ್ಟಿತೆಂದು ಅವರು ಒಳಗೊಳಗೆ ನೊಂದುಕೊಂಡಿದ್ದರು. ಇವರೊಡನೆ ಕೂಡಿಕೊಂಡರೆ, ಇಂಥ ಅವ್ಯವಹಾರಗಳು ನಡೆಯಬಹುದೆಂದು ಅವರು ದೂರದೂರವೇ ಉಳಿಯತೊಡಗಿದ್ದರು. ಅವರು ಹಾಗೆ ದೂರ ಉಳಿಯುದಕ್ಕೆ ಇನ್ನೊಂದು ವ್ಯವಹಾರವು ಕಾರಣವಾಗಿತ್ತು. ನಾನು ಬರೆದ 'ದೇಶಭಕ್ತಿಯ ಕಥೆಗಳು' ಎಂಬ ಪುಸ್ತಕವನ್ನು ಲೋಕಮಾನ್ಯ ಟ್ರಸ್ಟಿನವರು ಪ್ರಕಟಣೆಗೆ ತೆಗೆದುಕೊಂಡಾಗ, ನಾನು ಸರಕಾರಿ ನೌಕರನಾಗಿದ್ದರಿಂದ ನನ್ನ ಹೆಸರು ಹಾಕಿದರೆ ತೊಂದರೆ ಬಂದೀತೆಂದು ಶಂಕಿಸಿ ಧೂಲಾಸಾಹೇಬರ ಹೆಸರು ಹಾಕುವದಕ್ಕೆ ಒಪ್ಪಿಗೆ ಕೇಳಿಕೊಳ್ಳಲಾಗಿತ್ತು. ಅದು ತಮಗೆ ಅಪಮಾನಕರವೆಂದು ಅದಕ್ಕೆ ಒಪ್ಪಿಕೊಂಡಿರಲಿಲ್ಲ. ಇವರೊಡನೆ ಹೊಂದಿಕೊಂಡಿದ್ದರೆ ಯಾವ ಪ್ರಸಂಗದಲ್ಲಿ ಮಾನಕ್ಕೆ ಚ್ಯುತಿಯುಂಟಾಗುವುದೋ

ನಿಯಮವಿಲ್ಲವೆಂದು ಅವರು ಸಾಶಂಕರಾಗಿದ್ದರು. ಆದ್ದರಿಂದ ಅವರು ಗೆಳೆಯರಲ್ಲಿ ನಡೆದ ಚರ್ಚೆಯ ಕಾಲಕ್ಕೆ ಸಾಕಷ್ಟು ಮೌನವನ್ನೇ ತಳೆದಿದ್ದರು" ಎಂದು ಧೂಲಾಸಾಹೇಬರಿಗೆ ಆದ ಬೇಸರವನ್ನು ವ್ಯಕ್ತಪಡಿಸಿದ್ದಾರೆ.

ಸಾಹಿತ್ಯ ಕ್ಷೇತ್ರದಿಂದ ದೂರಾದ ಪಿ. ಧೂಲಾಸಾಹೇಬರು ರಾಷ್ಟ್ರೀಯ ಆಂದೋಲನದ ಕಡೆಗೆ ಮುಖ ಮಾಡುತ್ತಾರೆ. ಬಾಗಲಕೋಟೆಯ ಹಿಂದೂಸ್ತಾನಿ ಸೇವಾದಲವನ್ನು ಸೇರಿ ಸ್ವಾತಂತ್ರ್ಯದ ಹೋರಾಟದಲ್ಲಿ ಭಾಗವಹಿಸುತ್ತಾರೆ. ಆಗಲೇ ದೇಶಕ್ಕೆ ಸ್ವಾತಂತ್ರ್ಯ ದೊರೆಯದ ಹೊರತು ತಲೆಗೂದಲು ಕತ್ತರಿಸಿಕೊಳ್ಳುವುದಿಲ್ಲ ಮತ್ತು ಮದುವೆಯಾಗುವುದಿಲ್ಲ ಎಂದು ಪ್ರತಿಜ್ಞೆ ಕೈಗೊಂಡಿದ್ದು. ಈ ಭೀಷ್ಮ ಪ್ರತಿಜ್ಞೆ ತಮ್ಮ ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದಿದ್ದು ಅವರ ತಪಸ್ಸೆಂದೇ ಹೇಳಬಹುದು. ಇದೇ ಜಿಲ್ಲೆಯಲ್ಲಿ ಶ್ರೀ ಮಂಗಳವೇಢೆ ಶ್ರೀನಿವಾಸರಾಯರ 'ಕನ್ನಡಿಗ' ಪತ್ರಿಕೆಯಲ್ಲಿ ಕೆಲವು ಕಾಲ ಕೆಲಸ ಮಾಡಿದರು. ಕಾರಂತರೊಂದಿಗೆ ವಿಜಯಪುರದ ಹಲವು ಹಳ್ಳಿಗಳಾದ ಹಲಸಂಗಿ, ಭತಗುಣಕಿ ಮತ್ತು ಚಟಚಣ ಮೊದಲಾದ ಊರುಗಳಿಗೆ ಪ್ರವಾಸ ಕೈಗೊಂಡರು. ನಂತರ ಅವರೊಡನೆ 'ನಾಟಕ ಸಂಘ'ವೊಂದನ್ನು ಕಟ್ಟಿದರು. ಹೀಗೆ ಊರು ಬಿಟ್ಟು ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿ ಸಂಚಾರಿ ಜೀವನ ಮುಗಿಸಿ ಹಲಸಂಗಿಗೆ ಬಂದು ನೆಲಸಿದರು. ಇವರಿಗೆ ಆಯುರ್ವೇದ ಔಷಧಿಗಳ ಜ್ಞಾನವಿತ್ತು ಮತ್ತು ತಾಯತ-ತಂತ್ರಗಾರಿಕೆಯಲ್ಲಿ ನಂಬಿಕೆಯುಳ್ಳವರಾಗಿದ್ದರು. ಇದರಿಂದ ಪಿ. ಧೂಲಾಸಾಹೇಬರು ಒಂದಿಷ್ಟು ಲೋಕೋಪಕಾರ ಕಾರ್ಯವನ್ನು ಕೈಗೊಂಡರು. ಜಾನಪದ ವಿದ್ವಾಂಸರಾದ ದಿ. ಕಾ.ಹು ಬಿಜಾಪುರ ಅವರು ಪಿ. ಧೂಲಾಸಾಹೇಬರ ಅಣ್ಣ ಜಲಾಲ್ ಖಾನರ ಮಗ ಹುಸೇನ ಸಾಹೇಬರನ್ನು ಮಾತನಾಡಿಸಿದಾಗ ಅವರು ಹೀಗೆ ಹೇಳಿದ್ದರು- "ಪಿ. ಧೂಲಾ ಅವರು ಹಲಸಂಗಿಗೆ ಬಂದ ನಂತರ ಕೆಲಕಾಲ ಒಕ್ಕಲುತನದ ಕಡೆಗೆ ಲಕ್ಷ್ಯವಹಿಸಿದ್ದರು. ಬಾವಿಯನ್ನು ತೋಡಿಸಿ, ಎರಡು ಅಂತಸ್ತಿನ ಕಟ್ಟಿಗೆಯ ಹಂದರಬಾರಿ ಕಟ್ಟಿಸಿ ಮಟ್ಟಿಯಿಂದ ನೀರೆತ್ತುವ ಯೋಜನೆಯನ್ನು ರೂಪಿಸಿದ್ದರು. ತೋಟದಲ್ಲಿ ಮಾವು, ದಾಳಿಂಬೆ, ಪೇರಲ ಮುಂತಾದ ಹಣ್ಣಿನ ಗಿಡಗಳನ್ನು ಹಚ್ಚಿದ್ದರು. ಶಿಕ್ಷಣದಿಂದ ವಂಚಿತರಾದ ಹರಿಜನ ಮಕ್ಕಳನ್ನು ಕಂಡು ಮಮ್ಮಲ ಮರುಗಿದ್ದರು. ಅವರ ಭಾವೀ ಭವಿಷ್ಯ ಉಜ್ವಲಗೊಳಿಸುವ ಉದ್ದೇಶದಿಂದ ಗೆಳೆಯರ ಗುಂಪಿನ ಸದಸ್ಯರಾದ ಆದಮ ಮಸಳಿ ಅವರನ್ನು ಕರೆತಂದು ಹರಿಜನಕೇರಿಯ ಚಾವಡಿಯಲ್ಲಿ ಆ ಮಕ್ಕಳಿಗೆ ವಿದ್ಯಾಭ್ಯಾಸ ಕಲಿಸುವ ಏರ್ಪಾಡು ಮಾಡಿದ್ದರು" ಎಂದು ಅವರೊಟ್ಟಿಗೆ ಮಾತನಾಡಿದ್ದು ತಮ್ಮ ಕಾವ್ಯ 'ಪಿ. ಧೂಲಾಸಾಹೇಬ' ದಲ್ಲಿ ಹಂಚಿಕೊಂಡಿದ್ದಾರೆ.

ಓದು, ಬರಹ ಮತ್ತು ಸಾರ್ವಜನಿಕ ಸೇವೆಯಲ್ಲಿ ಜೀವನ ಸಾಗುತ್ತಿರುವ ಸಮಯದಲ್ಲಿ 25/01/1940 ರಂದು ಪ್ಲೇಗ ರೋಗಕ್ಕೆ ತುತ್ತಾಗಿ ಅಕಾಲಿಕ ಮರಣ ಹೊಂದಿದರು. ಆಗ ಅವರಿಗೆ ಇನ್ನು 40 ವರ್ಷವೂ ಪೂರ್ಣಗೊಂಡಿರಲಿಲ್ಲ. ಇವರ ಆಕಸ್ಮಿಕ ಅಗಲಿಕೆ ಹಲಸಂಗಿ ಗೆಳೆಯರಿಗೆ ಆಘಾತವಾಯಿತು. ಮಿತ್ರರೆಲ್ಲರಿಗೆ ಇವರ ಮರಣದ ಆಘಾತದಿಂದ ಹೊರಬರಲು ತುಂಬಾ ಸಮಯವೇ ಬೇಕಾಯಿತು. ಇವರ

ಅಗಲಿಕೆಯ ಬಗ್ಗೆ ಮಿತ್ರ ವಿನೀತ ರಾಮಚಂದ್ರರ ಶ್ರದ್ಧಾಂಜಲಿ ಗಮನಿಸಿದರೆ ಧೂಲಾಸಾಹೇಬರ ಪ್ರೀತಿ, ವಿಶ್ವಾಸ ಮತ್ತು ಗೌರವಕ್ಕೆ ಹಿಡಿದ ಕೈಗನ್ನಡಿಯಾಗಿದೆ– "ನನ್ನ ಆಪ್ತ ಮಿತ್ರರಲ್ಲೊಬ್ಬರಾದ ಹಲಸಂಗಿಯ ಧೂಲಾಸಾಹೇಬರು 25/01/1940ನೆಯ ದಿನ ಪ್ಲೇಗಿನ ಬೇನೆಯಿಂದ ಕಾಲವಶರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇನೆ. ಜಾತಿಯಿಂದ ಮುಸಲ್ಮಾನರು ಆದರೆ ಅವರ ನಡೆನುಡಿ, ಸಂಸ್ಕೃತಿಗಳೆಲ್ಲ ಅಚ್ಚ ಹಿಂದುವನ್ನು ಮೀರಿಸಿದ್ದವು. ಒಳ್ಳೇ ನಿಗ್ರಹಿಯಾದ ಜೀವನ ಅವರದು. ಚುಮುಚುಮು ನಸುಕಿನಲ್ಲಿ ತಣ್ಣೀರಿನ ಸ್ನಾನ, ಜಪಾನುಷ್ಠಾನ ಅವರ ನಿತ್ಯದ ಕಾರ್ಯಕ್ರಮವಾಗಿತ್ತು. ಕೊನೆತನಕ ಬ್ರಹ್ಮಚಾರಿಗಳಾಗಿದ್ದರು. ಹಲಸಂಗಿಯ ಶ್ರೀ ಮಧುರಚೆನ್ನ, ಸಿಂಪಿ ಲಿಂಗಣ್ಣ, ಕಾಪಸೆ ರೇವಪ್ಪ ಮೊದಲಾದ ಓರಿಗೆಯ ಗೆಳೆಯರ ಜೊತೆ ತನುಮನಗಳಿಂದ ದುಡಿದದು ಆ ಗೆಳೆಯರ ಬಳಗವು ಕರ್ನಾಟಕದ ಸಾಹಿತ್ಯ ಕ್ಷೇತ್ರದಲ್ಲಿ ಮತ್ತು ಜನಜೀವನದಲ್ಲಿ ಒಂದು ಗಣ್ಯಸ್ಥಾನ ಪಡೆಯುವಂತೆ ಮಾಡಿದವರಲ್ಲಿ ಇವರೊಬ್ಬರಾಗಿದ್ದರು".

ಇಂಥ ಸ್ಮರಣೀಯ ನಿಷ್ಠಾವಂತ ಧೂಲಾಸಾಹೇಬರ ನಿಧನವು ಅವರ ಬಂಧು ಬಳಗಕ್ಕೆ ಸಹಿಸಲಸಾಧ್ಯವಾದ ದುಃಖವನ್ನುಂಟು ಮಾಡಿತ್ತು. ಅವರ ಅಣ್ಣ ಜಲಾಲ್ ಖಾನರು ಧೂಲಾಸಾಹೇಬರ ವಸ್ತು–ಒಡವೆಗಳನ್ನು ಕಂಡಾಗಲೆಲ್ಲ ಕಣ್ಣೀರುಗರೆಯುತ್ತಿದ್ದರು. ಧೂಲಾ ಸಾಹೇಬರು ಸಂಗ್ರಹಿಸಿದ ಲಾವಣಿಗಳ ಗಂಟೊಂದಿತ್ತು. ಅದನ್ನು ಕಂಡಾಗಲೆಲ್ಲ ದುಃಖಕ್ಕೀಡಾಗುತ್ತಿದ್ದ ಜಲಾಲ್ ಖಾನರು ಆ ದುಃಖಭಾರದಿಂದ ತಪ್ಪಿಸಿಕೊಳ್ಳಲು ಯಾರ ಕಣ್ಣಿಗೂ ಬೀಳದಂತೆ ಎಲ್ಲಿಯೋ ಅದನ್ನು ತೆಗೆದಿಟ್ಟರು. ಈಗಲೂ ಅದು ಯಾರ ಕೈಗೂ ಸಿಕ್ಕಿಲ್ಲ. ಅದು ಸಿಕ್ಕರೆ ಕನ್ನಡ ಲಾವಣಿಯ ಸಂಪತ್ತು ಇನ್ನೂ ಹೆಚ್ಚಾಗುವುದೆಂದು ಬೇರೆ ಹೇಳಬೇಕಾಗಿಲ್ಲ ಎಂದು ಗುರುಲಿಂಗ ಕಾಪಸೆ ಅವರು ಕಳೆದು ಹೋದ ಅವರ ಸಾಹಿತ್ಯದ ಬಗ್ಗೆ ಬರೆಯುತ್ತಾರೆ. ಗೆಳೆಯರ ಗುಂಪಿನ ವೀರಪಥಿಕ, ಗೆಳೆಯರ ಅಭಿಮನ್ಯು, ಕನ್ನಡ ನವೋದಯ ಸಾಹಿತ್ಯದ ಮೊದಲ ಮಹಮ್ಮದೀಯ ಕವಿ ಪಿ. ಧೂಲಾಸಾಹೇಬರು ಇಂದು ಅವರ ಎರಡು ಕೃತಿಗಳೊಂದಿಗೆ ಬರಿ ನೆನಪು ಮಾತ್ರ. ಅವರು ರಚನೆ ಮಾಡಿದ ಅದೆಷ್ಟೋ ಸಾಹಿತ್ಯ ನಮಗೆ ದೊರೆಯದೇ ಇರುವುದು ನಮ್ಮ ದುರದೃಷ್ಟವೇ ಸರಿ.

**ಪರಾಮರ್ಶನ ಗ್ರಂಥಗಳು:**

1. ವೀರಪಥಿಕ, (2015), ಪಿ. ಧೂಲಾ, ವಿಜಯಪುರ: ಹಲಸಂಗಿ ಗೆಳೆಯರ ಪ್ರತಿಷ್ಠಾನ.
2. ಮಧುರಚೆನ್ನ, (2019), ಡಾ. ಜಿ.ಎಸ್. ಕಾಪಸೆ, ವಿಜಯಪುರ: ಹಲಸಂಗಿ ಗೆಳೆಯರ ಪ್ರತಿಷ್ಠಾನ.
3. ಸಿಂಪಿ ಲಿಂಗಣ್ಣ, (2013), ಶ್ರೀ ಮಧುರಚೆನ್ನರ ಸ್ಮೃತಿಗಳು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
4. ಧೂಲಾ ಸಾಹೇಬ ಪಿ., (2008), ಕಾ. ಹು. ಬಿಜಾಪುರ, ಬೆಂಗಳೂರು: ಕರ್ನಾಟಕ ಜಾನಪದ ಪರಿಷತ್ತು.
5. ಶಿವರಾಮ ಕಾರ0ತ, (2011), ಸ್ಮೃತಿ ಪಟಲದಿಂದ: ಭಾಗ–3, ಬೆಂಗಳೂರು: ಐಬಿಎಚ್ ಪ್ರಕಾಶನ.
6. ಗುರುಲಿಂಗ ಕಾಪಸೆ, ಹಲಸಂಗಿ ಗೆಳೆಯರು–ಕಿರು ಪರಿಚಯ, ವಿಜಯಪುರ: ಹಲಸಂಗಿ ಪ್ರತಿಷ್ಠಾನ ಮತ್ತು ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.